

ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

ಹೊಸ ಮಿಷನ್ ಕೇಂದ್ರ : ಕಲ್ಯಾಣಿ, ಪಶ್ಚಿಮ ಬಂಗಾಳ: 'ಶ್ರೀ ರಾಮಕೃಷ್ಣ ಸೇವಾ ಸಂಘ'ವೆಂಬ ಹೆಸರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಖಾಸಗಿ ಕೇಂದ್ರವು ಕಳೆದ ತಿಂಗಳು ರಾಮಕೃಷ್ಣ ಮಿಷನ್‌ಗೆ ಸೇರ್ಪಡೆಯಾಗಿದೆ.

ರಾಮಕೃಷ್ಣ ಮಠದ ಹೊಸ ಉಪ-ಕೇಂದ್ರ : ಬ್ರೆಜಿಲ್ ದೇಶದ ಕೇಂದ್ರವಾದ ಬ್ರೆಸಿಲಿಯಾದಲ್ಲಿರುವ 'ಸೆಂಟ್ರೋ ರಾಮಕೃಷ್ಣ ವೇದಾಂತ - ಬ್ರೆಸಿಲಿಯಾ'ವನ್ನು **ಸಾವೋ ಪೌಲೋ** ಕೇಂದ್ರದ ಉಪ-ಕೇಂದ್ರವನ್ನಾಗಿ ಮಾಡಲಾಗಿದೆ. ಈ ಕೇಂದ್ರವು ೨೦೧೧ರಲ್ಲಿ ಆರಂಭವಾಗಿತ್ತು.

ರಾಮಕೃಷ್ಣ ಮಿಷನ್ನಿನ ೧೨೫ನೇ ವಾರ್ಷಿಕೋತ್ಸವ

ಈ ಕೆಳಗಿನ ಕೇಂದ್ರಗಳು ವಿವಿಧ ಕಾರ್ಯಕ್ರಮಗಳೊಂದಿಗೆ ರಾಮಕೃಷ್ಣ ಮಿಷನ್ನಿನ ೧೨೫ನೇ ವಾರ್ಷಿಕೋತ್ಸವವನ್ನು ಆಚರಿಸಿವೆ:

ಆಲ್ಮೋರಾ : ಏಪ್ರಿಲ್ ೧೦ರಿಂದ ಜೂನ್ ೩ರ ವರೆಗೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿದೆ. ಅವುಗಳಲ್ಲಿ ಪ್ರಮುಖವಾದವು: ೧) ಶಾಲೆ-ಕಾಲೇಜು-ವಿಶ್ವವಿದ್ಯಾಲಯಗಳಲ್ಲಿ ೧೨ ವಿಚಾರ ಸಂಕಿರಣಗಳು. ೨) ೩೩ ಶಾಲೆ-ಕಾಲೇಜುಗಳಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳು. ೩) ಭಕ್ತರಿಗಾಗಿ 'ಆತ್ಮಬೋಧ' ಮತ್ತು 'ಕರೋಪನಿಷತ್' ತರಗತಿಗಳು. ೪) ೩ ದಿನಗಳ ಆಧ್ಯಾತ್ಮಿಕ ಶಿಬಿರ ೫) ವಿವಿಧ ಸ್ಥಳಗಳಲ್ಲಿ ೫ ಆಧ್ಯಾತ್ಮಿಕ ಪ್ರವಚನ. ೬) ವಿಶೇಷ ಪೂಜೆ. ೭) ಸಾಧು ಸಮ್ಮೇಳನ ೮) 'ಉತ್ತರಾಖಂಡದಲ್ಲಿ ಸ್ವಾಮಿ ವಿವೇಕಾನಂದರ ಹೆಜ್ಜೆ ಗುರುತುಗಳು' ಎಂಬ ಸಾಕ್ಷ್ಯಚಿತ್ರದ ಬಿಡುಗಡೆ. ೯) 'ವಿವೇಕ ಮಾರ್ಗ' ಎಂಬ ಪ್ರವಾಸ-ಉತ್ತರಾಖಂಡದಲ್ಲಿ ಸ್ವಾಮೀಜಿ ಸಂಚರಿಸಿದ ಪ್ರದೇಶಗಳನ್ನೊಳಗೊಂಡ ಕಾರ್ಯಕ್ರಮ. ೧೦) ಸ್ವಾಮೀಜಿ ಪ್ರತಿಕೃತಿಯೊಂದಿಗೆ ಮೆರವಣಿಗೆ ೧೧) ೨ ಸಾರ್ವಜನಿಕ ಸಭೆ ೧೨) ಭಜನ್ ಸಂಧ್ಯಾ . **ಅಂಟ್‌ಪುರ್:** ಮೇ ೨೬ ಹಾಗೂ ೨೭ ರಂದು ಹಾಗೂ ಜೂನ್ ೨-೩ರಂದು ಆಧ್ಯಾತ್ಮಿಕ ಶಿಬಿರ; ಮೇ ೨೮ ರಂದು ಯುವ ಸಮ್ಮೇಳನ. **ಚೆನ್ನೈ ಸ್ಟೂಡೆಂಟ್ಸ್ ಹೋಮ್:** ಜೂನ್ ೭ರಿಂದ ೯ರ ವರೆಗೆ ಆವಾಸಿ ಯುವ ಶಿಬಿರ. **ಗುವಹಾಟಿ:** ಜೂನ್ ೨೧ರಂದು ಭಕ್ತ ಸಮ್ಮೇಳನ. **ಹತಮನಿಗುಡ:** ಎರಡು ದಿನಗಳ ಆವಾಸಿ ಯುವ ಶಿಬಿರ. **ಝಾರ್‌ಗ್ರಾಮ:** ಮೇ ೨೮ರಂದು ಮಾನಸಿಕ ಆರೋಗ್ಯ ಕುರಿತ ಶಿಬಿರ. **ಮುಂಬೈ :** ಜೂನ್ ೧೧ ರಂದು ವಿಚಾರ ಸಂಕಿರಣ, ಚಿತ್ರ ಪ್ರದರ್ಶನ, ಸಂಗೀತ ಕಾರ್ಯಕ್ರಮಗಳು. **ನೌರಾ:** ಜೂನ್ ೧೭ರಂದು ಯುವಶಿಬಿರ. **ಪೊನ್ನಂಪೇಟೆ:** ಸ್ಥಳೀಯ ಕಾಲೇಜಿನಲ್ಲಿ ವಿಶೇಷ ಪ್ರವಚನ ಹಾಗೂ ಚಿತ್ರ ಪ್ರದರ್ಶನ. **ಪುರಿ ಮಿಷನ್ ಆಶ್ರಮ:** ಯುವ ಸಮ್ಮೇಳನ-ಜೂನ್ ೬ ಹಾಗೂ ಜೂನ್ ೧೧. **ರಾಜ್‌ಕೋಟ್:** ಶಾಂತಿ, ಸ್ವಾತಂತ್ರ್ಯಗಳಿಗಾಗಿ ಸರ್ವಧರ್ಮ ಸಮನ್ವಯ ಕುರಿತಂತೆ ಆಂತರರಾಷ್ಟ್ರೀಯ ಸಮ್ಮೇಳನ ಜೂನ್ ೧೮ರಂದು ನಡೆಯಿತು. **ರಾಂಚಿ ಮೊರಾಬಾದಿ:** ರಾಂಚಿ ಹಾಗೂ ಖುಂಟಿ ಜಿಲ್ಲೆಗಳಲ್ಲಿ ೩ ಯುವ ಶಿಬಿರಗಳು. **ಶ್ಯಾಮಲಾತಾಲ್:** ಮೇ ೩೦ರಂದು ಟನಕಪುರದಲ್ಲಿ ಸಾರ್ವಜನಿಕ ಸಭೆ. **ತಾಮ್‌ಲುಕ್:** ಮೇ ೬, ೭ ರಂದು ಆವಾಸಿ ಯುವ ಶಿಬಿರ. **ತ್ರಿಶೂರು:** ಮೇ ೩೧ರಂದು ಪ್ರವಚನ ಹಾಗೂ ಭಜನೆ ಕಾರ್ಯಕ್ರಮಗಳು.

ಶಾಖಾ ಕೇಂದ್ರಗಳ ಚಟುವಟಿಕೆಗಳು

ಆಲ್ಮೋರಾ: ಮೇ ೨೪ರಂದು ಸ್ವಾಮಿ ಸುಹಿತಾನಂದಜಿ ಮಹಾರಾಜ್ ಅವರು ಹೊಸದಾಗಿ ನಿರ್ಮಿತವಾದ ಭೋಜನಾಲಯವನ್ನು ಉದ್ಘಾಟಿಸಿದರು. **ಕಾಮಾರಪುಕುರ:** ಜೂನ್ ೪ರಂದು ಪ್ರಧಾನ ಕಾರ್ಯದರ್ಶಿ ಸ್ವಾಮಿ ಸುವೀರಾನಂಜಿ ಅವರು ಹೊಸದಾಗಿ ನಿರ್ಮಿತವಾದ ಕಾಮಾರಪುಕುರ ಶಾಲೆಯ ವಿವಿಧೋದ್ದೇಶ ಭವನವನ್ನು ಉದ್ಘಾಟಿಸಿದರು. **ನಾರಾಯಣಪುರ:** ಕುಟುಲ್ ಬುಡಕಟ್ಟು ಪ್ರದೇಶದಲ್ಲಿರುವ ಮಾಧ್ಯಮಿಕ ಶಾಲೆಯ ಹೊಸ ಕಟ್ಟಡವನ್ನು ಉದ್ಘಾಟಿಸಲಾಯಿತು. **ಮಲ್ಲೈಂಕರಣಿ:** ಹೈಸ್ಕೂಲು ವಿಭಾಗ ಹಾಗೂ STEM Laboratory ಯನ್ನು ಸ್ವಾಮಿ ಗೌತಮಾನಂದಜಿ ಅವರು ಉದ್ಘಾಟಿಸಿದರು. **ಜೆಮ್‌ಶೆಡ್‌ಪುರ್:** ಹೊಸದಾಗಿ ನಿರ್ಮಿತವಾದ ಸಾಧು ನಿವಾಸ 'ಶ್ರೀ ಮಾ ಶಾರದಾದೇವಿ ಭವನ'ವನ್ನು ಸ್ವಾಮಿ ಗಿರೀಶಾನಂದಜಿ ಅವರು ಉದ್ಘಾಟಿಸಿದರು.

Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020